ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಅನುದಾನ ಇಲ್ಲಿಯವರೆಗೆ ಬಿಡುಗಡೆಯಾಗಿರುವುದಿಲ್ಲ. ಸಂತಪುರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದಕ್ಕಾಗಿ ಸರ್ವೆ ಸಂಖ್ಯೆ. 105 ರಲ್ಲಿ 2 ಎಕರೆ ಜಮೀನನ್ನು ಪಡೆಯುವುದಕ್ಕಾಗಿ ಜಿಲ್ಲಾಧಿಕಾರಿಗಳು ಬೀದರ್ ರವರಿಗೆ ಭೂಸ್ವಾದೀನಪಡಿಸಿಕೊಡುವಂತೆ ಪತ್ರ ಬರೆಯಲಾಗಿದೆ. ಭೂಸ್ವಾದೀನಪಡಿಸಿಕೊಳ್ಳುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಆ) ಸರ್ಕಾರದ ಅನುಮತಿಯಿಂದ ಸದರಿ ಜಮೀನನ್ನು ಭೂಸ್ವಾಧೀನ ಕಾರ್ಯ ಮುಗಿದು, ಜಮೀನು ಮಂಜೂರು ಆದ ತಕ್ಷಣ ಬಸ್ ನಿಲ್ದಾಣ ಕಾಮಗಾರಿ 2003-04 ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಇಲ್ಲಿಯವರೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಇದರಿಂದಾಗಿ ಹಿಂತಿರುಗಿಸುವ ಪ್ರಶ್ನೆ ಇರುವುದಿಲ್ಲ.

ಔರಾದ್ ನಗರದಲ್ಲಿ ವಸತಿ ಗೃಹ ನಿರ್ಮಾಣದ ಬಗ್ಗೆ

1335 (1968) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ನಗರದಲ್ಲಿ ಜೆ.ಎಂ.ಎಫ್.ಸಿ ಜ್ಯುಡಿಷಿಯಲ್ ಕ್ವಾರ್ಟರ್ಸ್‌ಗಳ ನಿರ್ಮಾಣಕ್ಕೆ 10 ವರ್ಷದ ಹಿಂದೆಯೇ ಟೆಂಡರ್ ಕರೆದಿದ್ದರೂ ಇದುವರೆವಿಗೂ ನಿರ್ಮಾಣ ಕಾರ್ಯ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ವಿಷಯದಲ್ಲಿ ಇದುವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಸದರಿ ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸುವುದು ಯಾವಾಗ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅ) ಬೀದರ್ ಜಿಲ್ಲೆಯ ಔರಾದ್ ನಗರದ ಜೆ.ಎಂ.ಎಫ್. ಸಿ. ನ್ಯಾಯಾಧೀಶರ ವಸತಿ ಗೃಹವನ್ನು ದಿನಾಂಕ: 12.2.1996ರಲ್ಲಿ ಕಟ್ಟಲು ಪ್ರಾರಂಭಿಸಲಾಯಿತು. ಸದರಿ ಕಾಮಗಾರಿಗೆ ಒಟ್ಟು ಅಂದಾಜು ವೆಚ್ಚ ರೂ. 21.50 ಲಕ್ಷಗಳು ಆಗಿದ್ದು, 2002 03ನೇ ಸಾಲಿನ ಆಯವ್ಯಯದಲ್ಲಿ ರೂ. 7 ಲಕ್ಷಗಳನ್ನು ಒದಗಿಸಿದೆ. ಲೋಕೋಪಯೋಗಿ ಇಲಾಖೆಯು ಫೆಬ್ರವರಿ 2003ರಲ್ಲಿ ನೀಡಿದ ವರದಿಯ ಪ್ರಕಾರ ಈ ಕಟ್ಟಡದ ಎರಡನೇ ಹಂತದ ಕಾಮಗಾರಿಯು ನಡೆಯುತ್ತಿದ್ದು ಅದು ಇಷ್ಟರಲ್ಲೇ ಮುಕ್ತಾಯಗೊಳ್ಳುವ ಹಂತದಲ್ಲಿದೆ.

ಆ) ಈ ಮೇಲಿನ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಈ ಕಾಮಗಾರಿಯು ಈಗಾಗಲೇ ಪ್ರಾರಂಭಿಸಿದ್ದು ಅದನ್ನು ಇಷ್ಟರಲ್ಲೇ ಮುಗಿಸಲಾಗುವುದು.

ಔರಾದ ತಾಲ್ಲೂಕಿನಲ್ಲಿ ಅಕ್ರಮ ಸಾರಾಯಿ ಮಾರಾಟ

1337 (1970) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಸಾರಾಯಿ ಅಂಗಡಿಗಳಿಗೆ ನೀಡಿರುವ ಪರವಾನಿಗೆಗಳೆಷ್ಟು?

ಅ) ಪರವಾನಿಗೆಗಳಿಗಿಂತ ಎರಡರಷ್ಟು ಅಂಗಡಿಗಳನ್ನು ಗುತ್ತಿಗೆದಾರರು ಹೊಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ 3 ವರ್ಷಗಳಿಂದ ಪತ್ತೆ ಹಚ್ಚಲಾದ ಅಕ್ರಮ ಸಾರಾಯಿ ಮಾರಾಟ ಪ್ರಕರಣಗಳೆಷ್ಟು? ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 68.

ಆ) ಇಲ್ಲ.

ಇ) ಇಂತಹ ಯಾವುದೇ ಪ್ರಕರಣಗಳು ದಾಖಲಾಗಿಲ್ಲ ಉದ್ಭವಿಸುವುದಿಲ್ಲ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ಹಂಚಿಕೆ

1338 (1960) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಡಿಯಲ್ಲಿ ಕಾನೂನು ಬಾಹಿರವಾಗಿ ನಿವೇಶನ ಹಂಚಿರುವ ಪ್ರಕರಣಗಳು ಎಷ್ಟು (11.10.1999ರ ನಂತರ);

ಆ) ಎಷ್ಟು ಪ್ರಕರಣಗಳಲ್ಲಿ ಅದಲಿ ಬದಲಿ ನಿವೇಶನ ಕೊಡಲಾಗಿದೆ (ವರ್ಷವಾರು ವಿವರ ಕೊಡುವುದು);

ಇ) 14.10.99ರ ನಂತರ ಎಷ್ಟು ಪ್ರಕರಣಗಳಲ್ಲಿ ಎಷ್ಟು ಎಕರೆ ಪ್ರದೇಶವನ್ನು ಡಿ ನೋಟಿಫಿಕೇಷನ್ ಮಾಡಲಾಗಿದೆ;

ಈ) ಸಹಕಾರ ಸಂಘವಲ್ಲದೆ ಬೇರೆ ಸಂಸ್ಥೆಗಳಿಗೆ ಡೆವಲಪರ್‌ಗಳಿಗೆ ಎಷ್ಟು ಎಕರೆ ಜಮೀನು ಕೊಟ್ಟಿದೆ. ಇದು ಕಾನೂನಿನ ಪ್ರಕಾರ ಕ್ರಮಬದ್ಧವೇ;

ಉ) ಬಿ.ಪಿ.ಎ. ಮೂಲಕ ಎಷ್ಟು ಪ್ರಕರಣಗಳಲ್ಲಿ ಲೇಔಟ್ ನಿರ್ಮಿಸಲು ಎಷ್ಟು ಎಕರೆ ಜಮೀನನ್ನು ನೀಡಲಾಗಿದೆ; ಈ ರೀತಿ ಜಮೀನು ಪಡೆದ ವ್ಯಕ್ತಿ ಅಥವಾ ಸಂಸ್ಥೆಗಳು ಯಾವುವು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಯಾವುದೂ ಇಲ್ಲ.

ಆ) ಒಟ್ಟು 736 ನಿವೇಶನಗಳನ್ನು ಬದಲಿ ನಿವೇಶನವಾಗಿ ಹಂಚಿಕೆ ಮಾಡಲಾಗಿದೆ.

1) 1.10.99 ರಿಂದ 31.3.2000ದವರೆಗೆ 389

2) 2.1.2000 ರಿಂದ 21.3.2001ರವರೆಗೆ 219

3) 1.4.2001 ರಿಂದ 31.3.2002ರವರೆಗೆ 37

4) 1.4.2002 ರಿಂದ 28.2.2002ರವರೆಗೆ 91

ಇ) 22 ಪ್ರಕರಣಗಳಲ್ಲಿ ಒಟ್ಟು 342 ಎಕರೆ 31 ಗುಂಟೆ ಜಮೀನನ್ನು ಡಿ ನೋಟಿಫಿಕೇಷನ್ ಮಾಡಲಾಗಿದೆ.

ಈ) ಸಹಕಾರ ಸಂಘವಲ್ಲದ ಬೇರೆ ಸಂಸ್ಥೆಗಳಿಗೆ ಇದುವರೆಗೆ 7 ಪ್ರಕರಣಗಳಲ್ಲಿ ಒಟ್ಟು 73 ಎಕರೆ 36 ಗುಂಟೆ ಜಮೀನನ್ನು ನಿಯಮಾನುಸಾರ ನೀಡಲಾಗಿದೆ.

ಉ) 7 ಪ್ರಕರಣಗಳಲ್ಲಿ ಜಿ.ಪಿ.ಎ. ಮೂಲಕ ಅಧಿಕಾರ ಪಡೆದ ವ್ಯಕ್ತಿಗಳ ಹೆಸರಿಗೆ ಒಟ್ಟು 42 ಎಕರೆ 15 ಗುಂಟೆ ಜಮೀನು ನೀಡಲಾಗಿದೆ. ವಿವರ ಅನುಬಂಧದಲ್ಲಿ ನೀಡಲಾಗಿದೆ.